# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕೊರೊನಾ - ಕೋವಿಡ್ - 19

ಪತ್ರಿಕೆಯ ಹೆಸರು : NAME OF THE NEWS PAPER: [illegible] ದಿನಾಂಕ : DATE : 10/6/20

# ಕೆಮ್ಮು, ಶೀತ ಇದ್ರೆ ಕಚೇರಿಗೆ ಬರಬೇಡಿ

ಉ.ವಾ: 10.6.2020

## ಕೇಂದ್ರ ಸರ್ಕಾರಿ ಅಧಿಕಾರಿ, ಸಿಬ್ಬಂದಿಗೆ ಕೇಂದ್ರ ಸರ್ಕಾರದ ಹೊಸ ಮಾರ್ಗಸೂಚಿ

ನವದೆಹಲಿ: ವಿವಿಧ ಇಲಾಖೆಗಳಲ್ಲಿನ ಸಿಬ್ಬಂದಿಗೆ ಕೊರೊನಾ ವೈರಸ್ ಸೋಂಕು ಇರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡಿರುವ ಸರ್ಕಾರ, ಕೇಂದ್ರ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಪಾಲಿಸಬೇಕಿರುವ 13 ಅಂಶಗಳ ಹೊಸ ಮಾರ್ಗಸೂಚಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ.

ಹೊಸ ಮಾರ್ಗಸೂಚಿ ಪ್ರಕಾರ ಸೋಂಕಿನ ಲಕ್ಷಣ ಹೊಂದಿರುವ ಸಿಬ್ಬಂದಿ ಕಚೇರಿಗೆ ಬರುವಂತಿಲ್ಲ, ಸಣ್ಣ ಪ್ರಮಾಣದ ಜ್ವರ, ಕೆಮ್ಮು ಹೊಂದಿರುವ ಸಿಬ್ಬಂದಿ ಮನೆಯಲ್ಲೇ ಉಳಿಯಬೇಕು. ದಿನವೊಂದಕ್ಕೆ 20 ಸಿಬ್ಬಂದಿ ಮಾತ್ರ ಕಚೇರಿಗೆ ಬರಬೇಕು. ಕಂಟೈನ್ಮೆಂಟ್ ಕೇಂದ್ರಗಳಲ್ಲಿ ವಾಸಿಸುವ ಸಿಬ್ಬಂದಿ ಮನೆಯಿಂದಲೇ ಕೆಲಸ ಮಾಡಬೇಕು. ಈ ಮಾರ್ಗಸೂಚಿಗಳನ್ನು ಪಾಲಿಸದ ಅಧಿಕಾರಿ, ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಗಿದೆ.

### ಸೂಚನೆಗಳಲ್ಲೇನಿದೆ?

1. ಸೋಂಕಿನ ಲಕ್ಷಣಗಳಿಲ್ಲದ ಸಿಬ್ಬಂದಿ ಮಾತ್ರ ಕಚೇರಿಗೆ ಬರಬೇಕು.
2. ಕಂಟೈನ್ಮೆಂಟ್ ವಲಯಗಳಲ್ಲಿ ವಾಸವಿರುವ ಅಧಿಕಾರಿ, ಸಿಬ್ಬಂದಿ ಮನೆಯಿಂದಲೇ ಕೆಲಸ ಮಾಡಬೇಕು.
3. ದಿನವೊಂದಕ್ಕೆ 20 ಸಿಬ್ಬಂದಿ ಮಾತ್ರ ಕಚೇರಿಗೆ ಬರುವಂತೆ ಮತ್ತು ಉಳಿದವರು ಮನೆಯಿಂದಲೇ ಕೆಲಸ ಮಾಡುವುದಕ್ಕೆ ಅನುಗುಣವಾಗಿ ಪಾಳಿ ಪಟ್ಟಿ ಸಿದ್ಧಪಡಿಸಬೇಕು.
4. ಇಬ್ಬರು ಕಾರ್ಯದರ್ಶಿಗಳು ಒಂದೇ ಕ್ಯಾಬಿನ್ ಬಳಸುತ್ತಿದ್ದರೆ ದಿನ ಬಿಟ್ಟು ದಿನ ಒಬ್ಬರಂತೆ ಕಚೇರಿಗೆ ಬರಬೇಕು.
5. ಒಂದು ವಿಭಾಗದಲ್ಲಿ ಏಕಕಾಲಕ್ಕೆ ಇಬ್ಬರಿಗಿಂತ ಹೆಚ್ಚು ಅಧಿಕಾರಿಗಳು ಇರುವಂತಿಲ್ಲ.
6. ಕಚೇರಿ ಒಳಗಿದ್ದಾಗ ಫೇಸ್ ಶೀಲ್ಡ್, ಮಾಸ್ಕ್ ಧರಿಸುವುದು ಕಡ್ಡಾಯ.
7. ಬಳಸಿದ ಮಾಸ್ಕ್, ಕೈಗವಸುಗಳನ್ನು ಹಳದಿ ಬಣ್ಣದ ಬಯೋ ಮೆಡಿಕಲ್ ಕಸದ ಬುಟ್ಟಿಗೆ ಹಾಕಬೇಕು.
8. ಅಧಿಕಾರಿಗಳು ತಾವಿರುವ ಸ್ಥಳದಿಂದಲೇ ವೆಬ್-ರೂಮ್‌ನಲ್ಲಿ ಭಾಗವಹಿಸಲು ಅಗತ್ಯ ಸೌಲಭ್ಯ ಕಲ್ಪಿಸಬೇಕು.
9. ಮುಖಾಮುಖಿ ಸಭೆ, ಚರ್ಚೆ, ಸಂವಾದ ನಡೆಸಬಾರದು. ಸಂಪರ್ಕಕ್ಕೆ ಇಂಟರ್‌ಕಾಂ, ಫೋನ್ ಬಳಸಬೇಕು.
10. ಕಚೇರಿಯಲ್ಲಿ ಸ್ಯಾನಿಟೈಸರ್ ಇರಿಸಿ, ಅರ್ಧ ಗಂಟೆಗೊಮ್ಮೆ ಕೈ ತೊಳೆಯುವುದು ಕಡ್ಡಾಯ.
11. ಆಗಾಗ ಮುಟ್ಟುವ ಎಲೆಕ್ಟ್ರಿಕ್ ಸ್ವಿಚ್, ಬಾಗಿಲ ಹಿಡಿಕೆ, ಎಲಿವೇಟರ್ (ಲಿಫ್ಟ್) ಬಟನ್, ಮೆಟ್ಟಿಲುಗಳ ಹ್ಯಾಂಡ್ ರೇಲ್ ಮೊದಲಾದವುಗಳನ್ನು ಪ್ರತಿ ಗಂಟೆಗೊಮ್ಮೆ ಸ್ವಚ್ಛಗೊಳಿಸಬೇಕು. ಸಿಬ್ಬಂದಿ ಕೂಡ ತಾವು ಬಳಸುವ ಕೀಬೋರ್ಡ್, ಮೌಸ್, ಫೋನ್, ಎಸಿ ರಿಮೋಟ್‌ಗಳನ್ನು ಆಗಾಗ ಸ್ವಚ್ಛಗೊಳಿಸಬೇಕು.
12. ಸಿಬ್ಬಂದಿ ನಡುವೆ ಪರಸ್ಪರ ಒಂದು ಮೀಟರ್ ಅಂತರ ಕಾಯ್ದುಕೊಳ್ಳುವುದು ಕಡ್ಡಾಯ.
13. ಎಲ್ಲ ಅಧಿಕಾರಿಗಳು ಈ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಬೇಕು.